ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 04.09.2024.

**ಮುಂದುವರೆದ ಪಾಟೀ ಸವಾಲುಃ** ವಾದಿ ಪರ ಶ್ರೀ ಪಿ.ಎನ್.ಎಸ್. ವಕೀಲರಿಂದಃ

ನನ್ನ ಮಾವ ನಾಗಪ್ಪ ದತ್ತಕ ಹೋಗಿರುತ್ತಾರೆ, ಆ ಬಗ್ಗೆ ದತ್ತಕ ಪತ್ರ ಆಗಿರುತ್ತದೆ, ದಾಖಲೆ ನಮ್ಮ ಹತ್ತಿರ ಇರುವುದಿಲ್ಲ. ಆ ಬಗ್ಗೆ ದಾಖಲೆಯನ್ನು ನಾನು ನೋಡಿಲ್ಲ. ಸದರಿ ಮೂಲ ದತ್ತಕ ಪತ್ರ ಯಾರ ಹತ್ತಿರ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ದತ್ತಕ ಪತ್ರ ನೋಂದಣಿ ಆಗಿರುತ್ತದೆ ಅದನ್ನು ಮುಂದಿನ ತಾರಿಕದಂದು ತರುತ್ತೇನೆ. ಯಾವ ವರ್ಷದಲ್ಲಿ ದತ್ತಕ ಆಗಿರುತ್ತದೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ನಾಗಪ್ಪ ರವರು ದತ್ತಕ ಹೋಗಿಲ್ಲ ಹಾಗೂ ಆ ಬಗ್ಗೆ ದತ್ತಕ ಪತ್ರ ಆಗಿಲ್ಲ ಹಾಗೂ ಆ ಬಗ್ಗೆ ನಾವು ಸುಳ್ಳು ಹೇಳುತ್ತಿದ್ದೇವೆ ಎಂದರೆ, ಸಾಕ್ಷಿ ಸುಳ್ಳು ಇದ್ದರೆ ಅವರಿಗೆ ಒಂದು ಪಾಲು ಹೋಗಲಿ ಎಂದು ನುಡಿಯುತ್ತಾರೆ. ಸರ್ವೆ ನಂ.68/3 ರ ಜಮೀನು ಏಕತ್ರ ಕುಟುಂಬದ ಜಮೀನು ಅಲ್ಲ ಎಂದರೆ ಸರಿಯಲ್ಲ. ನನ್ನ ಮಾವ ನಾಗಪ್ಪ ಶರಣಪ್ಪ ರವರಿಗೆ ದತ್ತಕ ಹೋಗಿರುತ್ತಾರೆ. ಸದರಿ ಸರ್ವೆ ನಂ.68/3ರ ಜಮೀನು ಶರಣಪ್ಪ ರವರಿಗೆ ಹೋಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಶಿವಣ್ಣ ಮತ್ತು ಶರಣಪ್ಪ ರವರ ಮಧ್ಯ ಹಂಚಿಕೆಯಾಗಿರುವುದು ಸುಮಾರು 70-80 ವರ್ಷದ ಹಿಂದೆ ಆಗಿರಬಹುದು ಆಬಗ್ಗ ನನಗೆ ಗೊತ್ತಿಲ್ಲ. ಸದರಿ ಶಿವಣ್ಣ ಮತ್ತು ಶರಣಪ್ಪ ರವರ ಮಧ್ಯ ಆದ ಹಂಚಿಕೆ ಬಗ್ಗೆ ಕಾಗದವನ್ನು ನಾನು ನೋಡಿಲ್ಲ. ಸರ್ವೆ ನಂ.68/3ರ ಜಮೀನನ್ನು ಕಬಳಿಸಬೇಕೆಂಬ ಉದ್ದೇಶದಿಂದ ದತ್ತಕ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶರಣಪ್ಪ ರವರು 2002-03ರಲ್ಲಿ ತಿರಿಕೊಂಡಿರುತ್ತಾರೆ. ಶರಣಪ್ಪ ರವರಿಗೆ ಯಾರೂ ವಾರಸುದಾರರು ಇರುವುದಿಲ್ಲ ಎಂದರೆ ಸರಿ. ಸರ್ವೆ ನಂ.68/2ರ ಜಮೀನು 2007-08ನೇ ಸಾಲಿನವರೆಗೂ ಶರಣಪ್ಪ ತಂದೆ ಚಂದ್ರಶಾ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸಾಕ್ಷಿಗೆ ಒಂದು ಆರ್‌ಟಿಸಿ ತೋರಿಸುತ್ತಿದ್ದು, ಅದನ್ನು ನೋಡಿ ಗುರುತಿಸಿದ್ದರ ಮೇರೆಗೆ ಅದನ್ನು **ನಿಪಿ-39** ಎಂದು ಗುರುತಿಸಲಾಯಿತು.

ಸರ್ವೆ ನಂ.68/2ರಲ್ಲಿ ಇನ್ನುವರೆಗೂ ಹಂಚಿಕೆಯಾಗಿಲ್ಲ ಎಂದರೆ ಸರಿ. ಅದನ್ನು ಸಂತೋಷಿ ಗಂಡ ರಾಜೇಂದ್ರ ರವರು ಸಾಗುವಳಿ ಮಾಡುತ್ತಿದ್ದಾರೆ ಹಾಗೂ ಅವರ ಕಬ್ಜೆಯಲ್ಲಿ ಇರುತ್ತದೆ. ಸದರಿ ಸಂತೋಷಿ ಗಂಡ ರಾಜೇಂದ್ರ ರವರು ನಾಗಪ್ಪನ ಅಣ್ಣನ ಮಗಳು ಆಗಬೇಕು. ಸದರಿ ಸಂತೋಷಿ ಗಂಡ ರಾಜೇಂದ್ರ ಹೆಸರಿನಲ್ಲಿ ನಾಗಪ್ಪ ರವರು ದಾನಪತ್ರ ಮಾಡಿಕೊಟ್ಟಿರುತ್ತಾರೆ, ಅದರ ಆಧಾರದ ಮೇಲೆ ಸಂತೋಷಿ ಗಂಡ ರಾಜೇಂದ್ರ ರವರ ಹೆಸರು ದಾಖಲಾಗಿರುತ್ತದೆ. ಸದರಿ ಸಂತೋಷಿ ಗಂಡ ರಾಜೇಂದ್ರ ಅಂದರೆ 3ನೇ ಪ್ರತಿವಾದಿ, 1ನೇ ಪ್ರತಿವಾದಿಯ ಮಗಳು ಆಗಬೇಕು ಎಂದರೆ ಸರಿ. ಸದರಿ 3ನೇ ಪ್ರತಿವಾದಿಗೆ ಜಮೀನು ಹಂಚಿಕೆಯಲ್ಲಿ ಬಂದಿಲ್ಲ ಎಂದರೆ ಸರಿ. ಆದರೆ ನಾಗಪ್ಪ ರವರು ತನ್ನ ವಿವೇಚನೆ ಮೇರೆಗೆ ತನ್ನ ಅಣ್ಣನ ಮಗಳಿಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆ ಬಗ್ಗೆ ದಾನಪತ್ರ ಇರುತ್ತದೆ ಮುಂದಿನ ಬಾರಿ ತಂದು ಹಾಜರುಪಡಿಸುತ್ತೇನೆ.

ನಾನು ಹೇಳಿದಂತೆ ಯಾವುದೇ ದಾನಪತ್ರ ಆಗಿಲ್ಲ ಎಂದರೆ ಸರಿಯಲ್ಲ. ಆ ತರಹ ದಾನಪತ್ರ ಮಾಡುವ ಅಧಿಕಾರ ನಾಗಪ್ಪಗೆ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದು ಹೇಳಿದ ಭೂಮಿ ಏಕತ್ರ ಕುಟುಂಬದ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸದರಿ ದಾನಪತ್ರ ಆಗುವ ಕಾಲಕ್ಕೆ ನಾಗಪ್ಪ ಆ ಸ್ವತ್ತಿನ ಮಾಲಿಕ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ನಾಗಪ್ಪ ದಾನಪತ್ರ ಮಾಡಿಕೊಟ್ಟ ಜಮೀನಿಗೆ ಹೇಗೆ ಮಾಲಿಕ ಆಗಿರುತ್ತಾನೆ ಎಂದರೆ, ಸಾಕ್ಷಿ ದತ್ತಕ ಆಧಾರದ ಮೇಲೆ ಮಾಲಿಕನಾಗಿರುತ್ತಾರೆ ಎಂದು ನುಡಿಯುತ್ತಾರೆ. ವಾದಿ ನಾಗಪ್ಪನಿಗೆ ಅಣ್ಣನಾಗಬೇಕು, ನಾಗಪ್ಪನ ಜನಕ ತಂದೆ ಹೆಸರು ಶಿವಣ್ಣ ಇರುತ್ತದೆ.

**6ನೇ ಪ್ರತಿವಾದಿ ತನ್ನ ಪ್ರತಿವಾದ ಪತ್ರ ಸಲ್ಲಿಸುವ ಕಾಲಕ್ಕೆ ಪ್ರಮಾಣ ಪತ್ರದಲ್ಲಿ ನಾಗಪ್ಪ ತಂದೆ ಶಿವಣ್ಣ ಕಲಶೆಟ್ಟಿ ಎಂದು ಬರೆಯಿಸಿರುತ್ತಾರೆ.** ಅದೇ ರೀತಿ ವಕಾಲತ್ ಪತ್ರದಲ್ಲಿಯು ಕೂಡಾ 6ನೇ ಪ್ರತಿವಾದಿ ನಾಗಣ್ಣ ತಂದೆ ಶಿವಣ್ಣ ಕಲಶೆಟ್ಟಿ ಎಂದು ಬರೆಯಿಸಿರುತ್ತಾರೆ. ನಾಗಪ್ಪ ರವರ ಎಲ್ಲ ಗುರುತಿನ

ಚೀಟಿ, ಆಧಾರ ಕಾರ್ಡ್, ಶಾಲೆ ದಾಖಲೆಗಳಲ್ಲಿ, ಮತದಾನ ಗುರುತಿನ ಚೀಟಿಯಲ್ಲಿ ತಮ್ಮ ಹೆಸರು ಶಿವಣ್ಣ ಎಂದು ಕಾಣಿಸಿದ್ದರು ಎಂದರೆ ಸರಿ. ಎಲ್ಲಿಯು ಕೂಡಾ ನಾಗಪ್ಪ ತನ್ನ ತಂದೆ ಹೆಸರು ಶರಣಪ್ಪ ಎಂದು ಕಾಣಿಸಿಲ್ಲ ಎಂದರೆ, ಸಾಕ್ಷಿ ದತ್ತಕ ಹೋದ ನಂತರ ತನ್ನ ತಂದೆ ಹೆಸರು ಶರಣಪ್ಪ ಆಧಾರ ಕಾರ್ಡ್‌ದಲ್ಲಿ ನಮೂದಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ನಾಗಪ್ಪ ದತ್ತಕ ಹೋಗಿರುತ್ತಾರೆ ಎಂದು ನನಗೆ ನಿಖರವಾಗಿ ದಿನಾಂಕ ಗೊತ್ತಿಲ್ಲ. ಸುಮಾರು 10-15 ವರ್ಷಗಳ ಹಿಂದೆ ನಾಗಪ್ಪ ರವರು ದತ್ತಕ ಹೋಗಿರುತ್ತಾರೆ. ಈ ದಾವೆಯಲ್ಲಿ ವಾದಿ ನಾಗಪ್ಪ ತಂದೆ ಶಿವಣ್ಣ ಎಂಬ ಹೆಸರಿನಿಂದ ಸಮನ್ಸ್ ಕಳಹಿಸಿದಾಗ ಸದರಿ ನಾಗಪ್ಪ ಅದೇ ಹೆಸರಿನಿಂದ ಸಮನ್ಸ್ ತೆಗೆದುಕೊಂಡು ನ್ಯಾಯಾಲಯಕ್ಕೆ ಹಾಜರು ಆಗಿರುತ್ತಾರೆ ಎಂದರೆ ಸರಿ. ನನ್ನ ಪ್ರಕಾರ ದಾವೆಯಾದ ನಂತರ ದತ್ತಕ ಪತ್ರ ಆಗಿಲ್ಲ, ಅದಕ್ಕಿಂತ ಮುಂಚೆ ಆಗಿರುತ್ತದೆ.

ವಾದಿ ನಿಪಿ-34ರಂತೆ ಎಸ್‌ಬಿಐ ಕಲಬುರಗಿಯಲ್ಲಿ ಮನೆ ಕಟ್ಟಲಿಕ್ಕೆ ಸಾಲ ಪಡೆದುಕೊಂಡಿದ್ದ ಎಂದರೆ ಸರಿ, ಆದರೆ ಎಷ್ಟು ಸಾಲ ಪಡೆದುಕೊಂಡಿದ್ದ ಎಂದು ನಮ್ಮ ಗಮನಕ್ಕೆ ತಂದಿಲ್ಲ. ಸದರಿ ಸಾಲವನ್ನು ವಾದಿ ತನ್ನ ವೇತನದಲ್ಲಿ ಕಡಿತ ಮಾಡುತ್ತಿದ್ದ ಎಂದರೆ ಸರಿಯಲ್ಲ, ಸಾಕ್ಷಿ ಕುಟುಂಬದಿಂದ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಹಣ ಕುಟುಂಬದಿಂದ ಕೊಟ್ಟಿರುತ್ತೇವೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ, ನಗದು ರೂಪದಲ್ಲಿ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ವಾದಿ ಕಲಬುರಗಿಯಲ್ಲಿರುವ ಮನೆಯಲ್ಲಿ ತನ್ನ ಸ್ವಂತ ಹಣದಿಂದ ಕಟ್ಟಿಸಿರುತ್ತಾನೆ ಎಂದರೆ ಸರಿಯಲ್ಲ. ನಿಪಿ-35ರ ದಾಖಲೆಯಲ್ಲಿ ನಾಗಪ್ಪನ ತಂದೆ ಹೆಸರು ಶಿವಣ್ಣ ಎಂದು ನಮೂದಿಸಿರುತ್ತದೆ. ನಿಪಿ-36ರ ದಾಖಲೆಯಲ್ಲಿ ಕೂಡಾ ನಾಗಪ್ಪ ತಂದೆ ಶಿವಣ್ಣ ಎಂದು ನಮೂದಿಸಿರುತ್ತದೆ ಎಂದರೆ ಸರಿ.

ನಮ್ಮ ಕುಟಂಬದಲ್ಲಿ ಇನ್ನು ವರೆಗೂ ಹಂಚಿಕೆಯಾಗಿಲ್ಲ, ಆ ಕಾರಣದಿಂದ ವಾದಿಗೂ ಕೂಡಾ ದಾವಾ ಆಸ್ತಿಯಲ್ಲಿ ಸಮನಾದ ಹಿಸ್ಸೆ ಇರುತತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು 5 ಹಿಸ್ಸಾ

ಆಗಬೇಕು ಮತ್ತು ನಾವು ಕೌಂಟರ್ ಕ್ಲೇಮ್ ಮಾಡಿರುತ್ತೇವೆ ಆ ಪ್ರಕಾರ ಆದೇಶ ಆಗಬೇಕು ಎಂದು ನುಡಿಯುತ್ತಾರೆ. ನಾವು 5 ಜನ ಯಾರು ಎಂದರೆ, ವಾದಿ, ದತ್ತಾತ್ರಯ, ಶವಲಿಂಗಪ್ಪ, ಮಲ್ಲಮ್ಮ, ಚಂದ್ರಕಾಂತ, ನಾಗಪ್ಪ ರವರು ಇರುತ್ತೇವೆ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**